

# ಹೊಳೆಯೊಬಿನ ಪುಟಾಣಿ ಕನಸುಗಳು

ಬಾಗಿಲ ಮೇಲೆ ತಟ್ಟುವ ಸದ್ದು ಕೇಳಿಸಿದ ತಕ್ಷಣ ಆತನಿಗೆ ಗೊತ್ತಾಗುತ್ತಿತ್ತು ಅದು ಯಾರೆಂದು. ರಾಜಿ ಎಂದೂ ಬೆಲ್ ಒತ್ತೊಲ್ಲ. ಎಡಬಿಡದೆ ಬಾಗಿಲಿನ ಮೇಲೆ ತಟ್ಟಿ ಶಬ್ದ ಉಂಟು ಮಾಡುತ್ತಿದ್ದಳು. ಕಳೆದ ಮೂರು ವರ್ಷಗಳಿಂದ ಅವಳ ಅಮ್ಮ ಪ್ರತ್ಯೇಕವಾಗಿ ಹೇಳಿ ಅರ್ಥ ಮಾಡಿಸಿಕೊಟ್ಟಿದ್ದುದು ಅದು. "ಸಾರ್ ನಿದ್ರಿಸುತ್ತಿರೋವಾಗ ಯಾವ ರಗಳೇನೂ ಉಂಟು ಮಾಡಬಾರ್ದು. ಒಂದಿಷ್ಟೂ ಸದ್ದುಗದ್ದಲ ಕೊಡ್ಬ್ಬ." ತನ್ನ ಮಗಳು ಶಾಲೆ ಬಿಟ್ಟು ಬರುವಾಗ ಸ್ವಲ್ಪ ಆಹಾರವನ್ನು ಆ ಮನೆಯವರು ಕೊಡುವುದನ್ನೇ ಭಾರೀ ಉಪಕಾರದ ವಿಷಯವನ್ನಾಗಿ ಆ ಬಡಪಾಯಿ ಹೆಂಗಸು ಭಾವಿಸಿದ್ದಳು. ಅವಳು ನೆಲ ಸಾರಿಸುತ್ತ ಮಗಳೊಂದಿಗೆ ಪಿಸುಮಾತಿನಲ್ಲಿ ಸ್ಕೂಲಿನ ವಿಶೇಷಗಳನ್ನು ವಿಚಾರಿಸುತ್ತಿದ್ದಳು. ರಾಜಿಯೂ ಅಷ್ಟೇ, ಒಂದಿಷ್ಟೂ ಸದ್ದುಗದ್ದಲ ಮಾಡದೆ ಉತ್ತರ ನೀಡುತ್ತಿದ್ದಳು.

ಆತ ಸ್ವಲ್ಪ ಕಾಲದಿಂದೀಚೆಗೆ ಮಧ್ಯಾಹ್ನದ ಹೊತ್ತು ನಿದ್ರಿಸುತ್ತಿರಲಿಲ್ಲ. ನಿವೃತ್ತಿ ಹೊಂದಿದ ಮೇಲೆ ಎರಡು ತಿಂಗಳ ಕಾಲ ಆತನಿಗೆ ಮಧ್ಯಾಹ್ನದ ನಿದ್ರೆ ಒಂದು ಕಲೆಯಾಗಿ, ಒಂದು ಅನುಷ್ಠಾನವಾಗಿ ಪರಿಣಮಿಸಿತ್ತು ಮತ್ತು ಬರಿಸುತ್ತಿದ್ದ ನಿದ್ದೆಗೋಸ್ಕರ, ನಿಜ ಹೇಳುವುದಾದರೆ ಈ ನಡು ಹಗಲಿನ ನಿದ್ರೆಗೋಸ್ಕರವೇ ಆತ ತನಗೆ ಮುಂದುವರಿಕೆ ಸಿಕ್ಕಿದ ಎರಡು ವರ್ಷಗಳನ್ನು ಬೇಡವೆಂದು ತಿರಸ್ಕರಿಸಿ ಐವತ್ತೆಂಟನೆಯ ವಯಸ್ಸಿನಲ್ಲೇ ಉದ್ಯೋಗದಿಂದ ವಿರಮಿಸಿದುದು. ನಂತರ ಏಕೋ ಏನೋ ಹಗಲು ನಿದ್ದೆ ಅವನನ್ನು ತ್ಯಜಿಸಿ ಹೊರಟು ಹೋಯಿತು. ಈಗ ಊಟವಾದ ಮೇಲೆ ಸುಮ್ಮನೆ ಮಲಗುತ್ತಾನಷ್ಟೆ. ಆದರೆ, ರಾಜಿ ಮಾತ್ರ ಬಾಗಿಲನ್ನು ತಟ್ಟುವ ತನ್ನ ಹಳೆಯ ವಾಡಿಕೆಯನ್ನೇ ಮುಂದುವರಿಸಿದ್ದಳು.

ಬಾಗಿಲನ್ನು ತಟ್ಟುವ ಸದ್ದು ಮತ್ತೆ ಕೇಳಿಸಿತು. ನಿದ್ದೆ ಮಾಡಿರದಿದ್ದರೂ ತಾನು ಒಂದು ಸ್ವಪ್ನ ಲೋಕದಲ್ಲಿದ್ದೆ ಎಂಬುದನ್ನು ಆತ ಅರಿತುಕೊಂಡ. ತಾನು ಮನೆಯಲ್ಲಿ ಒಬ್ಬಂಟಿಯಾಗಿರುವೆ, ಅನಿತ ಮತ್ತು ಕಲಸದವಳು ಸೇರಿ ಏನನ್ನೋ ಕೊಂಡುಕೊಳ್ಳಲು ಹೊರಗೆ ಹೋಗಿದ್ದಾರೆ ಎನ್ನುವುದು ನೆನಪಾಗಿ ಆತ ಗಡಿಬಿಡಿಯಿಂದ ಎದ್ದು ಬಾಗಿಲು ತೆರೆದ.

"ಸಾರ್ ನಿದ್ದೆ ಮಾಡ್ತಿದ್ರಾ?"

– ರಾಜಿ ಕೇಳಿದಳು. ಅವಳ ಎಳೆಯ ಸ್ವರದಲ್ಲಿ ಅಂಜಿಕೆಯ ನೆರಳಿತ್ತು.

"ಇಲ್ಲ!"

ಅವಳು ಬೆನ್ನ ಮೇಲಿಂದ ಸ್ಕೂಲ್ ಬ್ಯಾಗ್ ತೆಗೆದು ನೆಲದಲ್ಲಿಟ್ಟು ಕೇಳಿದಳು.

"ಅಮ್ಮ ಇಲ್ವಾ?"

"ಇಲ್ಲ."

"ಚಿಕ್ಕಮ್ನೋರು?"

"ಅನಿತಾ ಮತ್ತು ಕಮಲ ಇಬ್ರೂ ಹೊರಗೆ ಹೋಗಿದ್ದಾರೆ. ಈಗ ಬಂದ್ಬಿಡ್ತಾರೆ."

ಹುಡುಗಿ ಮುಖ ತೊಳೆಯುವ ಸಲುವಾಗಿ ಬಚ್ಚಲು ಮನೆಗೆ ಹೋದಳು. ಆತ ಸೋಫಾದ ಮೇಲೆ ಕುಳಿತುಕೊಂಡು ರಿಮೋಟ್ ಕಂಟ್ರೋಲ್ ಉಪಯೋಗಿಸಿ ಟಿ.ವಿ. ನೋಡಲು ಪ್ರಾರಂಭಿಸಿದ. ಚಹಾ ಸೇವಿಸಬೇಕೆಂಬ ಕಾತರತೆಯುಂಟಾಯಿತು. ಹೋದವರು ಇದೇಕೆ ಇನ್ನೂ ಬಂದಿಲ್ಲ? ಅರ್ಧ ಗಂಟೆ ಯೊಳಗೆ ಬರುವುದಾಗಿ ತಿಳಿಸಿ ಹೊರಗೆ ಹೋದರಲ್ಲಾ? ಕ್ರಮೇಣ ಆತ ಟಿ.ವಿ.ಯ ವರ್ಣವೈಭವದಲ್ಲಿ ತಲ್ಲೀನನಾದ. ಏನು ನಡೆಯುತ್ತಿದೆಯೆಂಬುದನ್ನು ಆತ ಗಮನಿಸಲೇ ಇಲ್ಲ. ಚಲಿಸುವ ಚಿತ್ರಗಳನ್ನು ನೋಡುವ ಖಾಲಿಯಾದ ಮನಸ್ಸಿನಿಂದ ಆತ ಕುಳಿತುಕೊಂಡಿದ್ದ. ಇದ್ದಕ್ಕಿದ್ದಂತೆ ಗೋಡೆಯ ಮೇಲಿನ ಇಲೆಕ್ಟ್ರಾನಿಕ್ ಕ್ಲಾಕ್ ಸಂಗೀತವನ್ನು ನುಡಿಸಿದಾಗ ಆತನಿಗೆ ಮತ್ತೆ ಪರಿಸರ ಪ್ರಜ್ಞೆಯುಂಟಾಯಿತು. ಸಮಯ ನಾಲ್ಕು ಗಂಟೆ. ರಾಜಿ ಏನು ಮಾಡುತ್ತಿರಬಹುದು? ಆತ ಅಡಿಗೆ ಮನೆಯತ್ತ ನಡೆದ.

ಅಲ್ಲಿ, ಬರಿಯ ನೆಲದ ಮೇಲೆ ಮಲಗಿ



NEXT PAGE.....

ಅವಳು ನಿದ್ರಿಸುತ್ತಿದ್ದಳು. ಅವಳು ಆಹಾರ ಸೇವಿಸಿದಳೇ ಎಂದು ಕೂಡ ತಾನು ವಿಚಾರಿಸಿರಲಿಲ್ಲ. ಎಂಥ ಕ್ರೂರ ಮನುಷ್ಯನಾಗಿಬಿಟ್ಟೆ ತಾನು! ಆತ ಅಡಿಗೆ ಮನೆಯಲ್ಲೆಲ್ಲ ಹುಡುಕಾಡಿದ. ಅನ್ನದ ಪಾತ್ರೆ ಕಾಣಿಸುತ್ತಿಲ್ಲ. ಹಾಗೆಯೇ ಸಾರು, ಫಲ್ಯ ಇತ್ಯಾದಿಗಳೂ. ಅವನು ಫ್ರಿಜ್ ತೆರೆದು ನೋಡಿದ. ಇಲ್ಲ, ಏನೂ ಇಲ್ಲ. ಪಾಪದ ಹುಡುಗಿ! ಅವಳು ಏನನ್ನೂ ತಿಂದಂತಿಲ್ಲ. ಬೆಳಗ್ಗೆ ಏಳು ಗಂಟೆಗೆ ಅವಳ ಮನೆಯಿಂದ ಅಮ್ಮನ ಸಂಗಡ ಹೊರಟಾಗ ಏನಾದರೂ ತಿಂದಿದ್ದಿರಬಹುದು.

ಆಗ, ಮಂಡಿಯೂರಿ ಕುಳಿತು ಕರೆದ. "ರಾಜೀ..."

ಅವಳು ಅಲುಗಾಡಿ, ಅಂಗಾತ ಮಲಗಿದಳು. ಬತ್ತಿ ಹೋಗಿದ್ದ ಅವಳ ಹೊಟ್ಟೆಯನ್ನು ಕಂಡಾಗ ಅವನಿಗೆ ಸಂಕಟವೆನಿಸಿತು. ಆತ ಪುನಃ ಅವಳನ್ನು ಕೂಗಿದ. ಅವಳು ಎಚ್ಚೆತ್ತಳು. ತನ್ನೆದುರು ಸಾರ್‌ನನ್ನು ಕಂಡಾಗ ಅವಳು ಭಯದಿಂದ ಗಾಬರಿಗೊಂಡು ಎದ್ದಳು.

"... ಏನಾದ್ರೂ ತಗೊಂಡೆಯಾ ಹುಡುಗಿ?"

"ಇಲ್ಲ..." ಅವಳು ಹೇಳಿದಳು. "ಚಿಕ್ಕಮ್ಮೋರು ಏನೂ ಮಾಡಿಟ್ಟಿಲ್ಲಾಂತ ಕಾಣ್ತದೆ."

"ಹಾಗಿದ್ರೆ, ನೀನ್ಯಾಕೆ ಅದನ್ನ ನನ್ಹತ್ರ ಹೇಳ್ಲಿಲ್ಲ?"

"ಸಾರ್ ನೀವು ಟಿ.ವಿ. ನೋಡ್ತಾ ಇದ್ರಲ್ಲ, ತೊಂದ್ರೆ ಕೊಡ್ಬಾರದೂಂತ ಸುಮ್ಮಿದ್ದೆ."

"ನನ್ನ ಹುಡುಗೀ, ಅದನ್ನ ಕಟ್ಕೊಂಡಾ ನೀನು ಉಪವಾಸ ಬಿದ್ದಿದ್ದು!"

ತಟ್ಟನೆ ಅವನಿಗೆ ಆ ಸಂಭಾಷಣೆ ನೆನಪಿಗೆ ಬಂತು. ಅನಿತಾ, ಕಮಲ ಸೇರಿ ಹೊರಗೆ ಹೊರಟಾಗ ಹೇಳಿದ್ದು - "ರಾಜಿ ಬಂದು ತಲುಪುವಷ್ಟರಲ್ಲಿ ಬಂದ್ಬಿಡ್ಬೇಕು. ಅವ್ಳಿಗೆ ತಿನ್ನೋಕ್ಕೆ ಏನೂ ಇಲ್ಲ. ಬಂದು ಏನಾದ್ರೂ

**ಇ. ಹರಿಕುಮಾರ್**

**ಕನ್ನಡಕ್ಕೆ**

**ಕರುಣ್**

ತಿಂಡಿಗಿಂಡಿ ಮಾಡಿಕೊಡ್ಬೇಕು."

"ಅವ್ರು ಯಾವಾಗ ಬರ್ತಾರೇಂತ ಕಾದಿರೋದು?" ಆತ ಅಂದ. "ಬಾ, ನಾನೂ ನೀನು ಹೊರಗೆ ಯಾವ್ದಾದ್ರೂ ಹೋಟ್ಲಿಗೆ ಹೋಗಿ ಏನಾದ್ರೂ ತಿಂಡಿ ತಗೋಳೋಣ."

ಆತ ಹೆಂಡತಿಗೆ ಒಂದು ಚೀಟಿ ಬರೆದಿಟ್ಟು ಹೊರಕ್ಕಿಳಿದ. ಕಾರಿನಲ್ಲಿ ಅವನೊಂದಿಗೆ ಕುಳಿತು ಪ್ರಯಾಣ ಮಾಡಿದಾಗ ರಾಜಿ ತುಂಬ ಉಲ್ಲಾಸದಿಂದಿದ್ದಳು.

"ನಾನು ಇದೇ ಮೊದಲ್ನೇ ಸಲ ಕಾರ್ನಲ್ಲಿ ಹೋಗ್ತಿರೋದು!"

ಅವಳ ಮಾತುಗಳು ಏಕೋ ಏನೋ ಅವನನ್ನು ನೋಯಿಸಿದವು. ಸಾರಿನ ಕಾರಿನಲ್ಲಿ ಸಾರಿನ ಜೊತೆಯಲ್ಲಿ ಒಂದು ಪ್ರಯಾಣವೆಂಬುದು ಅವಳಿಗೆ ಎಷ್ಟು ಮುಖ್ಯವಾಗಿತ್ತು ಎಂಬುದನ್ನು ಆತ ಕಂಡುಕೊಂಡ. ಹಿಂದೆಲ್ಲ ಅವಳು ಸುಮ್ಮನೆ ನೋಡುತ್ತ ನಿಲ್ಲುತ್ತಿರುವಾಗ ಮಗ ಸಜೀವನೊಂದಿಗೆ ಕಾರಿನಲ್ಲಿ ಎಲ್ಲೆಲ್ಲಿಗೋ ಆತ ಹೋಗುತ್ತಿದ್ದುದುಂಟು. ಅವಳಿಗಿಂತ ಎಂಟು ವಯಸ್ಸು ಹೆಚ್ಚು ಸಜೀವನಿಗೆ. ಅಂದೆಲ್ಲ ಅವಳು ಬೆಪ್ಪಳಂತೆ ನೋಡಿ ನಿಲ್ಲುತ್ತಿದ್ದುದರ ಅರ್ಥ ಆತನಿಗೆ ಈಗ ಮನದಟ್ಟಾಯಿತು. ಅವಳಿಗೆ ತನ್ನ ಜೊತೆಯಲ್ಲಿ ಬರಬೇಕೆಂದಿದ್ದಿರಬಹುದು.

ಕರೆದರೆ ಒಡನೆಯೇ ಬರುತ್ತಿದ್ದಳೇನೋ. ಬಹಳಷ್ಟು ಸಮೀಪ ಪ್ರಯಾಣಗಳಾಗಿದ್ದವು ಅವು. ಜೋಸ್ ಜಂಕ್ಷನ್‌ವರೆಗೋ, ಬ್ರಾಡ್‌ವೇವರೆಗೋ ಮಾತ್ರ. ತಾನು ಅವಳನ್ನು ಕರೆದು ಕೊಳ್ಳಬಹುದಿತ್ತಲ್ಲ. ಆಗ ಕೆಲವು ಸಲವಾದರೂ!

... ರೆಸ್ಟೋರೆಂಟಿನ ಒಳಗೆ ಪ್ರವೇಶಿಸಿದಾಗ ರಾಜಿಗೆ ಅತ್ಯಾಶ್ಚರ್ಯವಾಯಿತು ಚಂದದ ದೀಪಗಳು ಜೋತಾಡುತ್ತಿದ್ದ ಮೇಲ್ಛಾವಣಿಯ ಎತ್ತರ ಅವಳನ್ನು ಬಹಳವಾಗಿ ಆಕರ್ಷಿಸಿತು. ಆಕಾಶವನ್ನೇ ಮುಟ್ಟುವ ಒಂದು ಛತ್ರಿಯ ಕೆಳಗಡೆ ಒಂದು ಪುಟ್ಟ ಇರುವೆಯಂತೆ ತಾನು ಎಂದು ಅವಳಿಗೆ ತೋರಿತು. ಗಾಜಿನ ಕದ ಗಳಿದ್ದ ದೊಡ್ಡ ದೊಡ್ಡ ಬೀರುಗಳಲ್ಲಿ ಬಗೆ ಬಗೆ ಬಣ್ಣದ ಸಿಹಿ ತಿನಿಸುಗಳು, ಕೇಕುಗಳು! ವಾತಾವರಣದಲ್ಲೆಲ್ಲ ದೋಸೆಯ ಹಾಗೂ ಅವಳು ತನ್ನ ಬಾಳಿನಲ್ಲಿ ಒಮ್ಮೆಯೂ ರುಚಿ ನೋಡಿರದಿದ್ದ ತಿಂಡಿಗಳ ನರುಗಂಪು. ಅವಳ ಮೂಗರಳಿತು.

"ಸಜೀವಣ್ಣ, ಇಲ್ಲೇನಾ ಬರೋದು?"

ಆತ ತಲೆಯಾಡಿಸಿದ. ಸಜಿ ಅಣ್ಣನ ಭಾಗ್ಯವನ್ನು ಕುರಿತು ಆಲೋಚಿಸಿದೊ ಏನೋ ಆ ಪುಟಾಣಿ ಹುಡುಗಿ ಒಂದು ನಿಮಿಷ ನಿಶ್ಶಬ್ದಳಾದಳು.

**ಬಾಗಿಲನ್ನು ತಟ್ಟುವ ಸದ್ದು ಮತ್ತೆ ಕೇಳಿಸಿತು. ನಿದ್ದೆ ಮಾಡಿರದಿದ್ದರೂ ತಾನು ಒಂದು ಸ್ವಪ್ನ ಲೋಕದಲ್ಲಿದ್ದೆ ಎಂಬುದನ್ನು ಆತ ಅರಿತುಕೊಂಡ. ತಾನು ಮನೆಯಲ್ಲಿ ಒಬ್ಬಂಟಿಯಾಗಿರುವೆ, ಅನಿತ ಮತ್ತು ಕೆಲಸದವಳು ಸೇರಿ ಏನನ್ನೋ ಕೊಂಡುಕೊಳ್ಳಲು ಹೊರಗೆ ಹೋಗಿದ್ದಾರೆ ಎನ್ನುವುದು ನೆನಪಾಗಿ ಆತ ಗಡಿಬಿಡಿಯಿಂದ ಎದ್ದು ಬಾಗಿಲು ತೆರೆದ.**



NEXT PAGE..... ಪುಟ 32

"ನಮ್ಮಪ್ಪ ನನ್ನನ್ನ ಇಂಥ ಹೊಟೇಲ್‌ಗಳಿಗೇನೂ ಕರ್‍ಕೊಂಡ್ಹೋಗ್ತಿರ್ಲಿಲ್ಲ" ಅವಳು ಅಂದಳು. ಆತ ಏನೂ ಮಾತನಾಡಲಿಲ್ಲ.

"ಇಲ್ಗೆಲ್ಲ ಬರ್‍ಬೇಕಾದ್ರೆ ತುಂಬಾನೆ ಹಣ ಬೇಕು, ಅಲ್ವಾ?"

"ಹೌದು, ತುಂಬಾ ಹಣಬೇಕು."

ಆತ ಸಿಂಗಪೂರ್ ನೂಡ್ಲ್ಸ್‌ಗೆ ಆರ್ಡರ್ ಮಾಡಿದ. ಅದು ತಯಾರಾಗಿ ಬರುವವರೆಗೆ ಹಣ್ಣಿನ ರಸ. ಹಣ್ಣಿನ ರಸವನ್ನು ಹೀರಿ ಕುಡಿಯುತ್ತ ರಾಜಿ ಹೇಳಿದಳು. "ತುಂಬಾ ರುಚಿ ಯಾಗಿದೆ."

ಅವಳು ನೂಡ್ಲ್ಸ್ ತಿನ್ನುವುದನ್ನು ಅವನು ತುಂಬಾ ವಾತ್ಸಲ್ಯದಿಂದ ನೋಡಿದ. ಜಾರಿ ಹೋಗುವ ನೂಡ್ಲ್ಸ್ ಅನ್ನು ಹೇಗೆ ಸುರುಳಿ ಸುತ್ತಿ ತೆಗೆದುಕೊಳ್ಳಬೇಕೆಂದು ಆತ ತೋರಿಸಿಕೊಟ್ಟ. ನೂಡ್ಲ್ಸ್ ಮುಗಿಯುವಷ್ಟರಲ್ಲಿ ಅವಳ ಪುಟ್ಟ ಹೊಟ್ಟೆ ತುಂಬಿ ಹೋಗಿತ್ತು. ಆತ ಐಸ್ ಕ್ರೀಮ್ ಕೌಂಟರಿಗೆ ಹೋಗಿ ಕಾಕ್‌ಟೆಯ್ಲ್ ಐಸ್‌ಕ್ರೀಮ್ ತೆಗೆದುಕೊಂಡು ಬಂದಾಗ ಅವಳು ಹೊಟ್ಟೆಯ ಮೇಲೆ ಕೈಯಿಟ್ಟುಕೊಂಡಳು.

ಕಾರಿನಲ್ಲಿ ತಿರುಗಿ ಹೊರಟಾಗ ಅವಳೆಂದಳು:

"ದೊಡ್ಡವ್ಳಾದನಂತ್ರ ನಾನು ತುಂಬಾ ಹಣ ಇರೋನನ್ನ ಮದುವೆಯಾಗ್ತೀನಿ. ಆಗ ನಾನು ಆಗಾಗ ಇಲ್ಗೆಲ್ಲಾ ಬಂದು ತಿಂಡಿ ತಿನ್ಬೋದಲ್ಲ!!"

ಹಾಗೇ ಸಂಭವಿಸಲಿ ಎಂದು ಆತ ಮನಸ್ಸಿನಲ್ಲೇ ಪ್ರಾರ್ಥಿಸಿದ.

ಅವಳಿಗೆ ಅವಳದೇ ಆದ ಒಂದು ಪ್ರಪಂಚವಿದೆ, ಅಭಿಲಾಷೆಗಳಿವೆ, ಭಾವನೆಗಳಿವೆ- ಎಂದೆಲ್ಲ ಆತ ಅರ್ಥಮಾಡಿಕೊಂ ತ. ಇದನ್ನು ತಿಳಿದುಕೊಳ್ಳಲು ಮೂರು ವರ್ಷಗಳೇ ಬೇಕಾದುವಲ್ಲ ಎಂಬ ಸಂಗತಿ ಅವನನ್ನು ಲಜ್ಜೆಗೀಡು ಮಾಡಿತು. ಅವನಿಗೆ ಸಂಬಂಧಿಸಿದಂತೆ ಅವಳು ಮನೆಗೆ ಕೆಲಸದವಳ ಮಗಳು ಮಾತ್ರವಾಗಿದ್ದಳು. ಮಧ್ಯಾಹ್ನ ಬರುತ್ತಾಳೆ, ಬಾಕಿ ಇರಿಸಿರುವ ಊಟ ಮಾಡುತ್ತಾಳೆ, ಅವಳ ಅಮ್ಮನಿಗೆ ಕೆಲಸದಲ್ಲಿ ಸಹಾಯ ಮಾಡುತ್ತಾಳೆ. ನಾಲ್ಕೋ ಐದೋ ಗಂಟೆಯಾಗುವಷ್ಟರಲ್ಲಿ ತಾಯಿಯೊಂದಿಗೆ ತನ್ನ ಮನೆಗೆ ಹೊರಟುಹೋಗುತ್ತಾಳೆ. ಅಷ್ಟು ಮಾತ್ರ. ಒಂದು ನೆರಳಿನ ನೆಲೆಯಂತೆ.

ಆ ಪುಟಾಣಿ ಹುಡುಗಿಯನ್ನು ಒಂದು ಹೊಸ ದೃಷ್ಟಿಯಿಂದ ನೋಡಲು ಅಂದಿನಿಂದ ಆತ ಕಲಿತ.

continued.....



NEXT PAGE.....

# ಕರಗಿ ಹೋದ ಕನಸುಗಳು



ಮರುದಿನ ಮಧ್ಯಾಹ್ನ ಮಲಗಿ ಎಚ್ಚೆತ್ತಾಗ ಆತ ಕಂಡದ್ದು ಯೂನಿಫಾರಂ ಕಳಚಿಟ್ಟು, ಹೂಗಳುಳ್ಳ ಉಡುಪು ಧರಿಸಿದ್ದ ರಾಜಿಯನ್ನು. ಆತ ಆಶ್ಚರ್ಯದಿಂದ ತನ್ನನ್ನೇ ನೋಡುವುದನ್ನು ಕಂಡಾಗ ಅವಳಿಗೆ ನಾಚಿಕೆಯಾಯಿತು. ಅವಳ ತಾಯಿ ಹೇಳಿದಳು.

"ನಿನ್ನೆ ಇಲ್ಲಿಂದ ಹೋಗಿ ಮಲಗುವವರೆಗೆ ತಮ್ಮೊಂದಿಗೆ ಹೋಟೆಲ್‌ಗೆ ಹೋದ ಕತೆಯೇ ಆಗಿತ್ತು ಅವ್ಳಿಗೆ. ಸಾರ್ ಈವತ್ತು ಬೆಳಿಗ್ಗೆ ಮನೆಂದ ಹೊರಡೋವಾಗ ಸ್ಕೂಲಿಂದ ಬಂದ್ಮೇಲೆ ಬದ್ಲಾಯಿಸಬೇಕಾದ ಉಡುಪು ತಗೋಬೇಕು ಅಂತ ಒಂದೇ ಸಮನೆ ಹಟ ಹಿಡಿದ್ಲು."

ನಿನ್ನೆ ರೆಸ್ಟೋರೆಂಟ್‌ಗೆ ಹೋದಾಗ ಬಿಳಿಯ ಉಡುಪು ಧರಿಸಿದ್ದ ಹುಡುಗಿಯನ್ನು ರಾಜಿ ಕಂಡಿದ್ದಳು. ಹಗಲಿಡೀ ಧರಿಸಿದ ಕೊಳಕು ಯೂನಿಫಾರಂ ಅವಳಿಗೆ ಅಸಹನೀಯವಾಗಿ ಕೀಳರಿಮೆಯನ್ನುಂಟು ಮಾಡಿದ್ದಿರಬಹುದು. ಆದರೆ, ಅವಳು ಏನನ್ನೂ ಹೊರಗೆ ಹೇಳಿ ತೋರಿಸಿರಲಿಲ್ಲ. ಸ್ವಲ್ಪವಾದರೂ ಶುಚಿಯಾಗಿ, ಒಪ್ಪವಾಗಿ ಓರಣವಾಗಿ ನಡೆಯಲು ಆ ಅನುಭವ ಅವ ಳನ್ನು ಪ್ರೇರೇಪಿಸಿರಬಹುದು.

ರೆಸ್ಟೋರೆಂಟಿನ ಪ್ರಯಾಣ ರಾಜಿಯ ಜೀವನ ವೀಕ್ಷಣೆಯನ್ನೇ ಮಾರ್ಪಡಿಸಿದೆಯೆಂದು ಆತನಿಗೆ ಮನವರಿಕೆಯಾಗಲು ತಡವೇನಾಗಲಿಲ್ಲ. ತನ್ನನ್ನು ಕಂಡಾಗ ಭಯದಿಂದ ನೋಡುತ್ತ ಸಂಕೋಚ ಪಟ್ಟು ನಿಲ್ಲುತ್ತಿದ್ದ ಆ ಹುಡುಗಿ ಈಗ ಸಮೀಪಕ್ಕೆ ಬಂದು ಮಾತನಾಡುತ್ತಾಳೆ, ಸ್ಕೂಲಿನ ವಿಶೇಷಗಳು, ಅವಳ ಮನೆಯ ಸಮಾಚಾರಗಳು, ನೆರೆಹೊರೆಯವರ ಹಾಗೂ ಸ್ನೇಹಿತೆಯರ ವಿಷಯಗಳನ್ನೆಲ್ಲ ಹೇಳುತ್ತಾಳೇ.

"ಸಾರ್‌ಗೆ ತುಂಬಾ ತರಲೆಯಾಗ್ತಿದೆ ಇವ್ಳಿಂದ, ಅಲ್ವಾ?" ಕಮಲ ಭಯಭಕ್ತಿಯಿಂದ ಹೇಳುತ್ತಾಳೆ. "ನಾನು ಯಾವತ್ತೂ ಇವ್ಳಿಗೆ ಹೇಳೋದುಂಟು ಸಾರಿಗೆ ತೊಂದ್ರೆ ಕೊಡ್ಬಾರ್ದೂಂತ."

"ನನಗೇನು ತೊಂದ್ರೆ?"

ಹೊರಗೆ ಹೋದಾಗ ರಾಜಿಗೋಸ್ಕರ ಮಿಠಾಯಿ ಕೊಂಡುಕೊಳ್ಳುವುದು ಅವನಿಗೆ ರೂಢಿಯಾಗುತ್ತ ಬಂದಿತು. ತನ್ನ ಮಗ ಸಜೀವ ಹುಡುಗನಾಗಿದ್ದಾಗ ಆತ ಮಿಠಾಯಿ ಖರಿದಿಸಿ ತರುತ್ತಿದ್ದ. ಅವನು ಬೆಳೆದು ದೊಡ್ಡವನಾಗಿ ಹೈಸ್ಕೂಲ್ ತಲುಪಿದಾಗ ಅವನು ಆ ಪರಿಪಾಠ ನಿಲ್ಲಿಸಿದ್ದ. ಅವನು ಕಾಲೇಜಿಗೆ ಸೇರಿ ದೂರ ಹೋದಾಗ, ಮನೆಗೆ ಬರುವಾಗ ಏನಾದರೂ ಕೊಂಡು ತರುವ ಸ್ವಭಾವ ಅವನಲ್ಲಿ ತೀರಾ ಇಲ್ಲವಾಗಿತ್ತು. ಇದೀಗ ಮತ್ತೊಬ್ಬರ ಮಗುವಿಗೋಸ್ಕರ ನೆನಪಿಸಿಕೊಂಡು ಮಿಠಾಯಿ ಕೊಂಡುಕೊಳ್ಳುವ ವಾಡಿಕೆ ಪುನರಾರಂಭಿಸಿದ್ದ.

ತಿಂಗಳಿಗೊಮ್ಮೆ ಬೀರುಗಳನ್ನೆಲ್ಲ ಶುಚಿಗೊಳಿಸಿ ಓರಣವಾಗಿಡುವ ಏರ್ಪಾಟಿತ್ತು ಅನಿತಾಗೆ. ಒಂದು ಕಷ್ಟದ ಕೆಲಸ ಅದು. ಮೊದಲು ಬೀರುವಿನಿಂದ ಬಟ್ಟೆಗಳನ್ನೆಲ್ಲ ಎಳೆದು ಹೊರಗೆ ಹಾಕುತ್ತಿದ್ದಳು. ಕೋಣೆಯಲ್ಲೆಲ್ಲ ರಾಶಿ ರಾಶಿಯಾಗಿ ಬಟ್ಟೆಗಳು ನಂತರ ಕಮಲಳ ನೆರವಿನಿಂದ ಒಂದೊಂದಾಗಿ ಮಡಚಿ ಒಳಗಿಡುತ್ತಾಳೆ. ಒಂದೊಂದು ಸೀರೆಯನ್ನು ಮಡಚಿ ಒಳಗಿಡುವಾಗಲೂ ಅದಕ್ಕೆ ಸಂಬಂಧಿಸಿದ ಕಥೆಗಳನ್ನು ಹೇಳುವುದು ರೂಢಿ. ಕಮಲೆಗಂತೂ ತುಂಬಾ ಉತ್ಸಾಹ, ಏಕೆಂದರೆ-ಅಂದು ಸಂಜೆ ಮನೆಗೆ ಹೋಗುವಾಗ ಅಷ್ಟೇನೂ ಹಾಳಾಗಿರದ ಅನೇಕ ಬಟ್ಟೆಗಳು ಅವಳಿಗೆ ದಕ್ಕುವುದು ಖಾತ್ರಿ. ಆಕೆ ಹೇಳುವುದಿದೆ.

"ಅಕ್ಕನೋರ ಹತ್ರ ಕೆಲ್ಸಕ್ಕೆ ಸೇರ್ಕೊಂಡ ಮೇಲೆ ನಾನು ದುಡ್ಡು ಕೊಟ್ಟು ಬಟ್ಟೇನೇ ಕೊಂಡ್ಕೊಂಡಿಲ್ಲ. ಅಕ್ಕನೋರಿಗೆ ಸಜೀವನ ಬದ್ಲಿಗೆ ಒಬ್ಳು ಹೆಣ್ಮಗಳಿದ್ದಿದ್ರೆ ನಮ್ ರಜನೀಗೂ ಏನೂ ತಗೋಬೇಕಾಗಿ ಬರ್ತಿರ್ಲಿಲ್ಲ..."

ಅಂದು ಸಂಜೆ ಹೋಗುವಾಗ ಕಮಲಳ ಕೈಯಲ್ಲಿ ಸುಮಾರು ದೊಡ್ಡದೊಂದು ಕಟ್ಟೇ ಇತ್ತು. ಬೀರುವನ್ನು ಓರಣಗೊಳಿಸಿದ ದಿನ, ಅದು ವಾಡಿಕೆಯಾದದ್ದರಿಂದ, ಆತ ಅನಿತಾಳೊಂದಿಗೆ ಏನನ್ನೂ ಕೇಳುತ್ತಿರಲಿಲ್ಲ. ಆದರೆ, ಮರುದಿನ ಅದರಂತೆಯೇ ಒಂದು ದೊಡ್ಡ ಕಟ್ಟನ್ನು ಕಂಡಾಗ ಅವನಿಗೆ ಜಿಜ್ಞಾಸೆ ಅಡಗಿಸಿಟ್ಟುಕೊಳ್ಳಲು ಸಾಧ್ಯವಾಗಲಿಲ್ಲ. ಕಮಲ ಮತ್ತು ರಾಜಿ ಹೋಗಿ ಬಾಗಿಲು ಮುಚ್ಚಿದ ಮೇಲೆ ಆತ ಹೆಂಡತಿಯನ್ನು ಕೇಳಿದ. "ಏನಿದು



NEXT PAGE......

"ಅವು ನಮ್ಮ ಹಳೆಯ ಕರ್ಟನ್ನುಗಳು. ರಾಜಿಗೆ ಈಗ ಮನೆಯನ್ನೆಲ್ಲ ನೀಟಾಗಿ ಇಡಬೇಕಂತೆ. ಅವಳಂತೂ ಸಂಪೂರ್ಣ ಬದಲಾಗಿಬಿಟ್ಟಿದ್ದಾಳೆ. ಈಗ ಮನೆಗೆ ತಲುಪಿದೊಡನೆ ಮನೆಯನ್ನು ಓರಣವಾಗಿಡೋದೇ ಕೆಲಸವಂತೆ. ಅಪ್ಪನೊಂದಿಗೆ ಕಿಟಕಿಗೆಲ್ಲ ಪೇಯಿಂಟ್ ಬಳಿಯಿಸಬೇಕು ಅಂತ ಹಠ ಮಾಡ್ತಿದಾಳೆ. ನಮ್ಮ ಕಿಟಕೀದೇ ಬಣ್ಣಬೇಕಂತೆ. ಹಾಗೇನೇ ಈಗ ಸ್ಟೀಲಿನ ಪ್ಲೇಟಿನಲ್ಲೇನೂ ಅವಳು ಊಟ ಮಾಡೋದಿಲ್ಲ. ಪಿಂಗಾಣಿ ಪ್ಲೇಟೇ ಬೇಕು...

"ಪಾಪದ ಹುಡುಗಿ. ಅವಳ ಮನೆ ತುಂಬ ಚಿಕ್ಕದು. ಎರಡು ಸಣ್ಣ ಕೋಣೆಗಳು, ಅಡಿಗೆ ಮನೆ, ಜಗಲಿ, ಇಷ್ಟೆ ಮುಗಿಯಿತು. ಆ ಹೆಂಚಿನ ಮನೆಯ ಸೌಕರ್ಯ. ಸುತ್ತಮುತ್ತಲೂ ಇರುವ ಮನೆಗಳಿಗ ಹೋಲಿಸಿದರೆ ಆ ಮನೆ ಪರವಾಗಿಲ್ಲ ಎನಿಸಬಹುದು. ಮನೆಯನ್ನು ಇನ್ನೂ ಸ್ವಲ್ಪ ಚೆನ್ನಾಗಿಡಬೇಕೆಂದು ರಾಜಿಗೆ ತೋಚಲೂ ಅದೇ ಕಾರಣವಿರಬಹುದು."

"ನಾನು ತರುವ ಮಿಠಾಯಿಗಳನ್ನೆಲ್ಲ ನೀನು ತಿನ್ನೋದು ಯಾವಾಗ?" ಎಂದು ಆತ ಒಮ್ಮೆ ಕೇಳಿದ್ದ.

ಮಿಠಾಯಿ ತಂದುಕೊಟ್ಟರೆ ಅದನ್ನು ಒಡನೆಯೇ ಅವಳು ತನ್ನ ಸ್ಕೂಲ್ ಬ್ಯಾಗಿನಲ್ಲಿ ಇಟ್ಟುಬಿಡುತ್ತಿದ್ದಳು.

"ನಾನು ಅದನ್ನು ಈಗ ತಿನ್ನೋಲ್ಲ ಸಾರ್. ಎಲ್ಲಾನೂ ಒಂದು ಜಾಡಿಯಲ್ಲಿ ಹಾಕಿಟ್ಟಿದ್ದೇನೆ" ಅವಳು ಸ್ವಲ್ಪ ಹೊತ್ತು ಏನನ್ನೋ ಆಲೋಚಿಸುತ್ತ ಸುಮ್ಮನಿದ್ದಳು. ಬಳಿಕ ಕರಾರುವಾಕ್ಕಾಗಿಯೇ ಹೇಳಿದಳು. "ನಮ್ಮ ಮನೆ ಈಗ ಸರಿ ಸುಮಾರು ಸಾರ್‌ನ ಮನೆ ಹಾಗೇನೇ ಆಗಿದೆ. ಒಂದು ಜಾಡಿ ತುಂಬಾ ಮಿಠಾಯಿ, ಒಂದು ಏರ್ಪೇಲಿ ತುಂಬಾ ಸಕ್ಕರೆ, ಒಂದು ಜಾಡೀಲಿ ತುಂಬಾ ಬೇಳೆ... ಹೀಗೆ ಎಲ್ಲಾನೂ ಓರಣವಾಗಿ ಜೋಡಿಸಿಟ್ಟಿದ್ದೀವಿ..."

ಅವನಿಗೆ ಏನು ಹೇಳಬೇಕೆಂದು ತೋಚ

**ಇ. ಹರಿಕುಮಾರ್**

ಕನ್ನಡಕ್ಕೆ

**ಕರುಣ್**

ಲಿಲ್ಲ. ಅವಳು ಯಾವುದರಿಂದಲೋ ಪಾರಾಗಬೇಕೆಂದು ಅಪೇಕ್ಷಿಸುತ್ತಾಳೆ. ಕೆಳಮಟ್ಟದಿಂದ ಬಯಕೆಯ ಉಚ್ಚಮಟ್ಟಕ್ಕೇರುವ ಮುಕ್ತಿ ಬಯಸುತ್ತಿದ್ದಾಳೆ. ತಾನು ಮಾಡುವ ಕರ್ಮಗಳ ಮೂಲಕ ಅದು ಸಾಧ್ಯವಾದೀತೆಂದು ಅವಳು ಭಾವಿಸುತ್ತಾಳೆ. ತನಗೆ ತುಂಬ ಪ್ರಿಯವಾದ ಮಿಠಾಯಿಯನ್ನು ಸಹ ತಿನ್ನದೆ ಅವಳು ತನ್ನ ಗುರಿಯನ್ನು ತಲುಪಲು ತ್ಯಾಗವನ್ನು ಅನುಷ್ಠಾನ ಮಾಡಿದ್ದಾಳೆ.

"ಸಾರ್, ಯಾವಾಗ ನಮ್ಮನೇಗೆ ಬರೋದು?"

"ಒಂದಿವ್ಸ ಬರ್ತೀನಿ!"

"ಸಾರ್, ನೀವು ಕಾರ್ನಲ್ಲಿ ಬರ್ಬೇಕು."

"ಅದ್ಯಾಕೆ?"

ಅವಳ ಮನೆಗೆ ಕಾರಿನಲ್ಲಿ ಹೋಗುವುದಾದರೆ ಎಂಟು ಕಿ.ಮೀ. ಸುತ್ತಿ ಬಳಸಿ ಹೋಗಬೇಕು. ಬದಲು, ರೈಲು ಹಳಿಯ ಮೂಲಕ ಹೊಳೆದಾಟಿದರೆ ಹತ್ತು ಹದಿನೈದು ನಿಮಿಷ ನಡೆಯುವ ದೂರ ಮಾತ್ರ. ಆದ್ದರಿಂದ ಮೊದಲನೆಯ ಸಲ ಹೋದಾಗ ನಡೆದೇ ಹೋಗಿದ್ದು. ಇದರಿಂದ ರಾಜಿಗೆ ಬಹಳ ಬೇಜಾರಾಗಿತ್ತು. ತನ್ನ ಸಂಗಡಿಗರೊಂದಿಗೆಲ್ಲ ಸಾರ್‌ಗೆ ಕಾರಿದೆಯೆಂದು ಅವಳು ಬಡಾಯಿ ಕೊಚ್ಚಿಕೊಂಡಿದ್ದಳು. ಹಾಗಿರುವಾಗ ಸಾರ್ ಮತ್ತು ಚಿಕ್ಕಮ್ಮ ಒಂದು ದಿನ ಬೆವರು ಕಿತ್ತು ಹರಿಯುತ್ತಿರುವ ಸ್ಥಿತಿಯಲ್ಲಿ ಅವಳ ಮನೆಗೆ ನಡೆದು ಬಂದಿದ್ದರು. ರಾಜಿ ತಮಗೆ ಸುಳ್ಳು ಹೇಳಿದ್ದಾಳೆಂದು ಜೊತೆಗಾತಿಯರೆಲ್ಲ ಆಕ್ಷೇಪಿಸಿದರು. ಆ ಅವಮಾನ ತೊಡೆದು ಹಾಕಲು ಸಾರ್ ಮತ್ತು ಚಿಕ್ಕಮ್ಮ ಒಮ್ಮೆ ಕಾರಿನಲ್ಲಿ ಬರಬೇಕು.

ರಾಜಿ ಆತ ಕುಳಿತುಕೊಳ್ಳುವ ಸೋಫಾದ ಕೈಯ ಮೇಲೆ ಕುಳಿತುಕೊಂಡು ಸುತ್ತಲೂ ಕಣ್ಣಾಡಿಸಿದಳು. ಯಾರೂ ಇಲ್ಲವೆಂಬುದನ್ನು ಖಚಿತಪಡಿಸಿಕೊಂಡು ಕೇಳಿದಳು.

"ನಾನು ಸಾರ್‌ನನ್ನು ಮದ್ವೆಯಾಗಲೆ?"

ಆತ ನಗಲಿಲ್ಲ. ಅರವತ್ತನೇ ವಯಸ್ಸಿನಲ್ಲಿ ಬಂದ ಈ ವಿವಾಹಾಲೋಚನೆಯನ್ನು ಆತ ಶ್ರದ್ಧೆಯಿಂದ ಮನನ ಮಾಡಿದ. ಹುಡುಗಿ ನಿಜಕ್ಕೂ ಬಹಳ ಗಂಭೀರವಾಗಿಯೇ ಈ ಪ್ರಶ್ನೆಯನ್ನು ಕೇಳಿದ್ದಳು. ಎರಡು ನಿಮಿಷ ತಬ್ಬಿಬ್ಬಾಗಿಸುವ ಅನಿಶ್ಚಿತಾವಸ್ಥೆಯಲ್ಲಿ ಅವಳನ್ನು ಕೆಡವಿ ಆತ ಕೇಳಿದ.

"ಅದರಿಂದ ನನಗೇನು ಲಾಭ?"

ಸ್ವಲ್ಪ ಆಲೋಚಿಸಿದ ಬಳಿಕ ಅವಳೆಂದಳು.

"ಸಾರ್‌ಗೆ ಏನೂ ಲಾಭವಿಲ್ಲ!"

ಅವಳು ತನ್ನ ನೆಲೆಯನ್ನು ಅರ್ಥ ಮಾಡಿಕೊಂಡಿದ್ದಳು. ಅವಳ ಸ್ವರದಲ್ಲಿ ಅಪಾರವಾದ ವ್ಯಥೆಯಿತ್ತು. ಹಿಂದೊಮ್ಮೆ ಅವಳು ಹೇಳಿದ್ದುದನ್ನು ಆತ ಜ್ಞಾಪಿಸಿಕೊಂಡ. "ನಾನು ಒಬ್ಬ ಹಣವಂತನನ್ನೇ ಮದುವೆಯಾಗ್ತೀನಿ.

ಅರವತ್ತನೇ ವಯಸ್ಸಿನಲ್ಲಿ ಬಂದ ಈ ವಿವಾಹಾಲೋಚನೆಯನ್ನು ಆತ ಶ್ರದ್ಧೆಯಿಂದ ಮನನ ಮಾಡಿದ. ಹುಡುಗಿ ನಿಜಕ್ಕೂ ಬಹಳ ಗಂಭೀರವಾಗಿಯೇ ಈ ಪ್ರಶ್ನೆಯನ್ನು ಕೇಳಿದ್ದಳು. ಎರಡು ನಿಮಿಷ ತಬ್ಬಿಬ್ಬಾಗಿಸುವ ಅನಿಶ್ಚಿತಾವಸ್ಥೆಯಲ್ಲಿ ಅವ ಳನ್ನು ಕೆಡವಿ ಆತ ಕೇಳಿದ.
ಅದರಿಂದ ನನಗೇನು ಲಾಭ?

ಆಗ ನಾನು ಆಗಾಗ ದೊಡ್ಡ ದೊಡ್ಡ ಹೋಟ್ಲುಗಳಿಗೆ ಹೋಗಿ ತಿಂಡಿ ತಿನ್ನಿದ್ದಲ್ಲ!"

ಬರಿದಾಗಿ ಹೋದ ತನ್ನ ವಿವಾಹಾಲೋಚನೆಯ ವ್ಯಥೆಯನ್ನು ಹೇರಿಕೊಂಡು ಅವಳು ನಡೆದು ಹೋದಳು.

ಒಂದು ಶನಿವಾರ ಅವಳ ಮನೆಗೆ ಪ್ರಯಾಣದ ಏರ್ಪಾಟಾಯಿತು. ಹಿಂದಿನ ದಿನವೇ ಯೋಚಿಸಿದ್ದ ಕಾರಣ. ಅವಳು ಬದಲಾಯಿಸಲೆಂದು ಕಳೆದ ಓಣಂ ಹಬ್ಬಕ್ಕೆ ಖರೀದಿಸಿದ್ದ ಉಡುಪುಗಳನ್ನು ತೆಗೆದುಕೊಂಡಿದ್ದಳು. ಕಾರಿನಲ್ಲಿ ಪ್ರಯಾಣ ಮಾಡುವಾಗ ಸ್ಟೈಲಿನಲ್ಲಿ ಇರಬೇಕೆಂದು ಅವಳು ತೀರ್ಮಾನಿಸಿದ್ದಳು. ರಾಜಿ ಅನಿತಾಳಿಗೆ ಹತ್ತಲು ಅವಕಾಶ ಸಿಗುವ ಮುನ್ನವೇ ಮುಂದಿನ ಸೀಟಿನಲ್ಲಿ ಆತನ ಪಕ್ಕದಲ್ಲಿ ಜಾಗ ಗಿಟ್ಟಿಸಿಕೊಂಡಳು. ಹಿಂದಿನ ಸೀಟಿಗೆ ಬರಲು ಕಮಲಾ ಬಹಳಷ್ಟು ಒತ್ತಾಯಪಡಿಸಿದರೂ ಅವಳು ಕಿವಿಗೊಡಲಿಲ್ಲ. ಅನಿತಾ ಹಿಂದಿನ ಸೀಟಿನಲ್ಲಿ ಕಮಲಾಳೊಂದಿಗೆ ಕುಳಿತುಕೊಳ್ಳುವುದರಲ್ಲೇ ತೃಪ್ತಿಪಡಬೇಕಾಯಿತು.

"ಇವ್ಳು ಭಾರೀ ಹಠಮಾರಿ" ಕಮಲಾ ಹೇಳಿದೋಳು. "ಸಾರನ್ನೂ ಅಕ್ಕನವರನ್ನೂ ತುಂಬಾನೆ ತೊಂದ್ರೆ ಕೊಟ್ಟು ಕಾಡ್ತಿದಾಳೆ... ಏನು ಘನಂದಾರಿ ಸಂಗ್ತಿ ತೋರೋಕ್ಕೇಂತ ಅವಳು ಸಾರನ್ನ ಕರ್ಕೊಂಡ್ಹೋಗ್ತಿರೋದು!"

"ಅವಳಿನ್ನೂ ಮಗುವಲ್ವಾ?" ಅನಿತಾ [illegible]ದಳು. "ಸ್ವಲ್ಪ ಕಾಲ ಹಾಗೆಲ್ಲಾ ಇರ್ತದೆ... [illegible] ಅವ್ಳು, ಈಗ ಸಾರನ್ನ ಸ್ವಂತವಾಗ್ನಿ ಕೊ[illegible]ಲ್ಲ!"

ರಾಜಿ ಮುಂದಿನ ಸೀಟಿನಲ್ಲಿ ಕುಳಿತುಕೊಂಡುದರ ಗುಟ್ಟು ಆತನಿಗೆ ವಿಳಂಬವಿಲ್ಲದೆ ತಿಳಿಯಿತು. ಅವರು ಹೋಗುತ್ತಿರುವ ದಾರಿ ತುಂಬ ಇಕ್ಕಟ್ಟಾಗಿತ್ತು. ಒಂದೊಂದು ತಿರುವಿನಲ್ಲೂ ಅವಳು ದಾರಿ ಹೇಳಿಕೊಡುತ್ತಿದ್ದಳು. ಎಂದಿಗೂ ಇದು ಕೊನೆಗೊಳ್ಳಲಾರದೇನೋ ಎಂಬುದಾಗಿ ತೋರುವ ಪ್ರಯಾಣದ ಕೊನೆಯಲ್ಲಿ ಆತ ಒಂದು ಚಿಕ್ಕ ಮನೆಯ ಎದುರು ಕಾರು ನಿಲ್ಲಿಸಿದ.

ಆತನ ಮನಸ್ಸು ಪೂರ್ತಿ ಇಳಿದು ಹೋಯಿತು. ಎರಡು ವರ್ಷಗಳ ಹಿಂದೆ ಅದನ್ನು ನೋಡಿದ್ದನಾದರೂ ಆತನ ನೆನಪಿನಲ್ಲಿ ಅದು ಉಳಿದಿರಲಿಲ್ಲ. ಆತನ ಮನಸ್ಸಿನಲ್ಲಿದ್ದುದು ರಾಜಿ ಬಾಯಿ ತುಂಬ ಬರೆದು ತೋರಿಸಿದ ಚಿತ್ರಗಳು ಮಾತ್ರ. ಅವಾದರೋ ತುಂಬ ವರ್ಣಮಯವಾಗಿದ್ದವು. ತನ್ನ ಮುರುಟಿ ಹೋದ, ಶುಷ್ಕವಾದ ಭಾವನೆಗೆ ಸಹ ಬಣ್ಣ ಬಳಿಯಲು ಆ ಪೋರಿ ಚಿತ್ರಕಾರಿಗೆ ಸಾಧ್ಯವಾಗಿತ್ತು!

ಮನೆಯ ಹೊರಭಾಗದ ಮೇಲ್ಪದರವೆಲ್ಲ ಕಿತ್ತು ಕಿತ್ತು ಅಸಹ್ಯವಾಗಿತ್ತು. ಮುಖ್ಯ ಬಾಗಿಲಿಗೆ ಮುರುಕಲು ಚಾಯಿಕಾಯಿ ಪೆಟ್ಟಿಗೆಯ ಹಲಗೆಗಳನ್ನು ಹೊಡೆದಿದ್ದರು. ರಾಜಿ ಆತನ ಕೈ ಹಿಡಿದು ಒಳಗೆ ಕರೆದುಕೊಂಡು ಹೋಗಿ ಒಂದು ಕುರ್ಚಿಯಲ್ಲಿ ಕುಳ್ಳಿರಿಸಿದಳು. ಆತ ಸುತ್ತಲೂ ನೋಡಿದ. ಎಲ್ಲಾ ಬಾಗಿಲುಗಳಿಗೂ, ಕಿಟಕಿಗಳಿಗೂ ಪರದೆಗಳನ್ನು ಇಳಿಬಿಟ್ಟಿದ್ದರು. ಅವನು ಆ ಪರದೆಗಳ ಗುರುತು ಹಿಡಿದ. ಕರ್ಟನ್‌ಗಳನ್ನು ಕಟ್ಟಿರುವುದು ಗೋಣಕಾಟಿನ ಹುರಿಯಿಂದ. ಆತ ನೋಡುತ್ತಿದ್ದುದನ್ನು ಕಂಡಾಗ ಕಮಲಾ ನಗತೊಡಗಿದಳು.

> **ಒಪ್ಪಿಗೆ**
>
> **ನನ್ನಾಕೆ ಹೇಳಿದ್ದಕ್ಕೆಲ್ಲಾ**
>
> **ಒಪ್ಪಿಗೆ**
>
> **ವರದಕ್ಷಿಣೆ ಸ್ವೀಕರಿಸಿದ**
>
> **ತಪ್ಪಿಹೆ!**
>
> **ನಾಗರಾಜ ದೊಡ್ಡಮನಿ**

"ರಾಜಿಯ ಅಪ್ಪ ತಂತಿ ತಂದು ಕರ್ಟನ್ ಕಟ್ಟೋಣ ಅಂತ ಅಂದಿದ್ರು. ಆದ್ರೆ ಈ ಹುಡ್ಗೀಗೆ ತಾಳ್ಮೆ ಬೇಕಲ್ಲ. ಸಾರ್ ಇಲ್ಲಿಗೆ ಬರುವಷ್ಟರಲ್ಲಿ ಕರ್ಟನ್ ಹಾಕ್ಬೇಕೊಂತ ಹೇಳಿ ಅವಳೇ ಕಟ್ಟಿದ್ದು ಇವನ್ನೆಲ್ಲಾ..."

ಕಮಲ ಒಳಕ್ಕೆ ನಡೆದಾಗ ರಾಜಿ ಆತನ ಸಮೀಪಕ್ಕೆ ಬಂದು ಪಿಸು ಮಾತಿನಲ್ಲಿ ಹೇಳಿದಳು.

"ನಾನು ಹೇಳಿರ್ಲಿಲ್ವಾ, ನಮ್ ಮನೆ ಈಗ ಸಾರಿನ ಮನೇ ಹಾಗೇನೇ ಆಗಿದೇಂತ..."

ತಟ್ಟನೆ ಏನನ್ನೋ ಜ್ಞಾಪಿಸಿಕೊಂಡು ರಾಜಿ ಒಳಕ್ಕೋಡಿದಳು.

ಒಳಗಿನಿಂದ ಅಳುವಿನ ಸದ್ದು ಕೇಳಿಸತೊಡಗಿದಾಗ ಆತ ಧಿಗ್ಗನೆಂದು. ನಡೆದುದು ಏನೆಂಬುದನ್ನು ತಿಳಿಯದೆ ಪಿಳಿಪಿಳಿ ನೋಡುತ್ತ ಕಸಿವಿಸಿ ಪಡುತ್ತಿದ್ದಾಗ ರಾಜಿ ಅಳುತ್ತಳುತ್ತ ಓಡಿ ಬಂದಳು. ಅವಳ ಕೈಯಲ್ಲಿ ಒಂದು ಖಾಲಿ ಜಾಡಿ ಇತ್ತು. ಅವಳು ಏನನ್ನೂ ಹೇಳದೆ ಅದನ್ನು ಹಿಡಿದುಕೊಂಡು ಅಳುತ್ತಿದ್ದಳು. ಹೊರಗೆ ಬಂದ ಕಮಲಾ ವಿಷಯವೇನೆಂದು ಹೇಳಿದಳು.

"ಸಾರ್ ಕೊಡುವ ಮಿಠಾಯಿಗಳನ್ನೆಲ್ಲ ರಾಜಿ ತಿನ್ನದೇನೇ ಈ ಜಾಡೀಲಿ ಇಟ್ಟಿರ್ತಿದ್ಳು. ಸಾರ್ ಬಂದ್ರೆ ತೋರಿಸ್ಬೇಕು ಅಂತ್ಹೇಳಿ ಇಟ್ಟಿದ್ಳು. ಈವತ್ತು ಬೆಳಗಾನ ನಮ್ಮಣ್ಣನ್ ಮಕ್ಳು ಬಂದಿದ್ರು. ಮೂರು ಹುಡುಗರಿದ್ರು. ಎಷ್ಟೆಂದ್ರೂ ಮಕ್ಕಳ್ವಾ, ನಮ್ಮಾಯಿ ಎಷ್ಟೆಲ್ಲೋ ಗೋಗರೆದು ನೋಡ್ದ್ರು ಅವುಗಳು ಕೇಳ್ತಾವಾ? ಚಾಕಲೇಟ್‌ಗಳನ್ನೆಲ್ಲ ತಿಂದ್ಹಾಕಿಬಿಟ್ರು..."

ರಾಜಿ ನೆಲದಲ್ಲಿ ಕುಸಿದು ಕುಳಿತಳು. ಆತ ಏನನ್ನೂ ಹೇಳಲಾಗದೆ ಬೆಪ್ಪನಂತೆ ಕುಳಿತುಬಿಟ್ಟ. ರಾಜಿಗೆ ನಷ್ಟವಾದುದು ಒಂದು ಶೀಷೆ ಮಿಠಾಯಿ ಮಾತ್ರವಲ್ಲವೆಂದು ಆತನಿಗೆ ಮನವರಿಕೆಯಾಗಿತ್ತು. ಒಂದು ಜಾಡಿಗೆ ಬದಲು ಎರಡು ಶೀಷೆ ಕೊಂಡುಕೊಳ್ಳೋಣವೆಂದು ಹೇಳಿ ಅವಳನ್ನು ಸದ್ಯಕ್ಕೆ ಸಾಂತ್ವನಗೊಳಿಸಲು ಶ್ರಮಿಸಬಹುದು. ಆದರೆ, ಏನನ್ನೂ ಹೇಳಲಾಗದೆ ಆತ, ಮೊಳೆ ಕಳೆದು ಹೋಗಿ ಅಲುಗಾಡುತ್ತಿರುವ ಮುರುಕಲು ಕುರ್ಚಿಯ ಮೇಲೆ ಮಂಕು ಬಡಿದು ಕುಳಿತನಷ್ಟೆ.